78

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಎಸ್. ಐ. ಕಪ್ಪತ್ತನವರ್, ಸಹಾಯಕ ಕೃಷಿ ನಿರ್ದೇಶಕರು, ಬಾದಾಮಿ, ಇವರ ಕರ್ತವ್ಯ ನಿರ್ಲಕ್ಷ್ಯತೆಯ ಬಗ್ಗೆ – ಶಿಸ್ತು ಕ್ರಮ ಕುರಿತು.

**ಓದಲಾಗಿದೆ:**

1. ಜಿಲ್ಲಾಧಿಕಾರಿಗಳು, ಬಾಗಲಕೋಟೆ, ಇವರ ಪತ್ರ ಸಂಖ್ಯೆ: ಸಿಎಎಲ್/ಸಿಆರ್–85/2009–10, ದಿನಾಂಕ: 10–02–2012.
2. ಸರ್ಕಾರದ ಆದೇಶ ಸಂಖ್ಯೆ: ಕೃತೋಇ 12 ಕೃಪವಿ 2010, ದಿನಾಂಕ: 09–03–2010.
3. ಸರ್ಕಾರದ ಆದೇಶ ಸಂಖ್ಯೆ: ಕೃತೋಇ 12 ಕೃಪವಿ 2010, ದಿನಾಂಕ: 02–06–2010.
7. ಕೃಷಿ ಆಯುಕ್ತರು, ಇವರ ಪತ್ರ ಸಂಖ್ಯೆ: ಸಿಬ್ಬಂದಿ–1/ವಿಚಾರಣೆ–5/27/2009–10, ದಿನಾಂಕ: 07–03–2011 ಮತ್ತು 16–08–2012.

*********

**ಪ್ರಸ್ತಾವನೆ:**

2009–10ನೇ ಸಾಲಿನ ಅಕ್ಟೋಬರ್ 2009ರಲ್ಲಿ ತಿಂಗಳಿನಲ್ಲಿ ಉತ್ತರ ಕರ್ನಾಟಕದ ಬಾಗಲಕೋಟೆ ಜಿಲ್ಲೆಯಲ್ಲಿ ಸುರಿದ ಭಾರಿ ಮಳೆಯಿಂದ ಸಂಭವಿಸಿದ ಅತಿವೃಷ್ಟಿ/ಪ್ರವಾಹ ಜಿಲ್ಲೆಯಲ್ಲಿ ಉಂಟು ಮಾಡಿದ ಬೆಳೆಹಾನಿ ಕುರಿತು ವರದಿ ಸಲ್ಲಿಸುವಂತೆ ಶ್ರೀ ಎಸ್. ಐ. ಕಪ್ಪತ್ತನವರ್, ಇವರಿಗೆ ಸಹಾಯಕ ಕೃಷಿ ನಿರ್ದೇಶಕರು, ಬಾದಾಮಿ, ಇವರನ್ನು ನಿಯಯೋಜಿಸಲಾಗಿದ್ದು, ಬೆಳೆಹಾನಿ ಪರಿಹಾರವನ್ನು ಮೊದಲೇ ವಿತರಿಸಿದ್ದರೂ ಸಹ ಆ ಬಗ್ಗೆ ಪರಿಶೀಲಿಸದೆ ಮತ್ತೊಮ್ಮೆ ಅನಾವಶ್ಯಕವಾಗಿ ಪರಿಹಾರಕ್ಕಾಗಿ ಶಿಫಾರಸ್ಸು ಮಾಡಿ ಕರ್ತವ್ಯಲೋಪ ಎಸಗಿರುತ್ತಾರೆ. ಎಂಬುದಾಗಿ ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ದಿನಾಂಕ: 10–02–2010ರ ಜಿಲ್ಲಾಧಿಕಾರಿಯವರ ವರದಿಯನ್ನು ಆಧರಿಸಿ ಸದರಿ ಅಧಿಕಾರಿಯವರನ್ನು ಕ್ರಮಾಂಕ(2)ರಲ್ಲಿ ಓದಲಾದ ದಿನಾಂಕ: 09–03–2010ರ ಸರ್ಕಾರದ ಆದೇಶದಲ್ಲಿ ಅವರ ಮೇಲಿನ ಶಿಸ್ತುಕ್ರಮವನ್ನು ಬಾಕಿಯಿರಿಸಿ ಅಮಾನತ್ತುಗೊಳಿಸಲಾಗಿತ್ತು.

ತದನಂತರ ಕ್ರಮಾಂಕ(3)ರಲ್ಲಿ ಓದಲಾದ ದಿನಾಂಕ: 02–06–2010ರ ಆದೇಶದಲ್ಲಿ ಅವರ ಅಮಾನತ್ತು ಆದೇಶವನ್ನು ಪುನರ್ ಪರಿಶೀಲಿಸಿದ ಸರ್ಕಾರ ಅವರ ಅಮಾನತ್ತನ್ನು ತೆರವುಗೊಳಿಸಿ ಸೇವೆಯಲ್ಲಿ ಮರುಸ್ಥಾಪಿಸಿದೆ.

ಕ್ರಮಾಂಕ(4)ರಲ್ಲಿ ಓದಲಾದ ಪತ್ರದಲ್ಲಿ ಕೃಷಿ ಆಯುಕ್ತರು ಈ ವಿಷಯದಲ್ಲಿ ಜಂಟಿ ಕೃಷಿ ನಿರ್ದೇಶಕರು, ಬಾಗಲಕೋಟೆ, ಇವರಿಂದ ತನಿಖೆ ನಡೆಸಿ ವಿವರವಾದ ವರದಿಯೊಂದನ್ನು ಸಲ್ಲಿಸಿ ಅವರು ನೀಡಿರುವ ವರದಿಯಂತೆ ಪ್ರಕರಣವನ್ನು ಮುಕ್ತಾಯಗೊಳಿಸುವಂತೆ ಕೋರಿರುತ್ತಾರೆ.

ಜಂಟಿ ಕೃಷಿ ನಿರ್ದೇಶಕರು, ಬಾಗಲಕೋಟೆ, ಇವರು ತನಿಖೆ ನಡೆಸಿ ನೀಡಿರುವ ವರದಿಯಲ್ಲಿ ಶ್ರೀ ಎಸ್. ಐ. ಕಪ್ಪತ್ತನವರ್, ಸಹಾಯಕ ಕೃಷಿ ನಿರ್ದೇಶಕರು, ಇವರು ಜಿಲ್ಲಾಧಿಕಾರಿ,

ಬಾಗಲಕೋಟೆರವರ ಆದೇಶದಂತೆ 2009-10ನೇ ಸಾಲಿನ ಅಕ್ಟೋಬರ್ ಮಾಹೆಯಲ್ಲಿ ಜಿಲ್ಲೆಯಲ್ಲಿ ಅತಿವೃಷ್ಟಿ ಪ್ರವಾಹದಿಂದ ಉಂಟಾದ ಬೆಳೆಹಾನಿ ಸಮೀಕ್ಷೆ ಬಗ್ಗೆ ಸಲ್ಲಿಸಿದ ವರದಿಯ ಪ್ರಕಾರ ಬೆಳೆ ಹಾನಿ ನಷ್ಟವನ್ನು ರೂ. 10.72.96.638/- ಎಂಬುದಾಗಿ ಅಂದಾಜು ಮಾಡಿ ರೂ. 10.65.36.000/-ಗಳನ್ನು ಪರಿಹಾರ ಧನವಾಗಿ ವಿತರಿಸಿರುವುದಾಗಿ ವರದಿ ಮಾಡಿರುತ್ತಾರೆ. ತದನಂತರ ಜಿಲ್ಲಾಧಿಕಾರಿ, ಬಾಗಲಕೋಟೆರವರ ಮೌಖಿಕ ಆದೇಶದಂತೆ ಬೆಳೆ ಹಾನಿ ಅಂದಾಜು ಸಮೀಕ್ಷೆಯನ್ನು ಸರಿಯಾಗಿ ನಿರ್ವಹಿಸುವಂತೆ ಜಂಟಿ ಕೃಷಿ ನಿರ್ದೇಶಕರ ಕಛೇರಿಯಿಂದ ದಿನಾಂಕ: 08-02-2010ರಂದು ನೀಡಿದ ನಿರ್ದೇಶನದಂತೆ ಶ್ರೀ ಎಸ್. ಐ. ಕಪ್ಪತ್ತನವರ್, ಸಹಾಯಕ ಕೃಷಿ ನಿರ್ದೇಶಕರು, ಬಾದಾಮಿ, ಇವರು ಪ್ರಾಥಮಿಕ ಅಂದಾಜು ಸಮೀಕ್ಷಾ ವರದಿಯನ್ನು ರೂ. 1099.80 ಎಂದು ವರದಿ ಮಾಡಿದ್ದು ಈ ಮೊತ್ತವು ಹೆಚ್ಚಾಗಿರುತ್ತದೆ. ಸದರಿ ಸಮೀಕ್ಷಾ ಕಾರ್ಯವನ್ನು ಸ್ಥಳಿಯ ಜನಪ್ರತಿನಿಧಿಗಳ, ಶಾಸಕರುಗಳ ಮತ್ತು ಸಚಿವರುಗಳ ಸಲಹೆ-ಸೂಚನೆಗಳನ್ನು ಗಮನದಲ್ಲಿರಿಸಿಕೊಂಡು ಮಾಡಿರುವುದರಿಂದ ಅಂದಾಜು ಮೊತ್ತವು ಹೆಚ್ಚಾಗಿರುತ್ತದೆ ಎಂಬುದಾಗಿ ಸಹಾಯಕ ಕೃಷಿ ನಿರ್ದೇಶಕರುರವರು ತಹಶೀಲ್ದಾರ್ ಇವರಿಗೆ ಮನವಿ ಮಾಡಿಕೊಂಡಿರುತ್ತಾರೆಂದು ಜಂಟಿ ಕೃಷಿ ನಿರ್ದೇಶಕರು ತಮ್ಮ ವರದಿಯಲ್ಲಿ ತಿಳಿಸಿ ಬಾದಾಮಿ ತಾಲ್ಲೂಕಿನ 146 ಕಾಮಗಾರಿ ಬೆಳೆಹಾನಿ ಪರಿಹಾರ ಕುರಿತು ರೈತರಿಂದ ಪುನಃ ಅರ್ಜಿಗಳು ತಹಶೀಲ್ದಾರ್‌ರವರ ಕಛೇರಿ ಹಾಗೂ ಸಹಾಯಕ ಕೃಷಿ ನಿರ್ದೇಶಕರು, ಇವರೀರ್ವರಿಗೂ ಸಲ್ಲಿಸಿದ್ದು ಅದರಂತೆ ಸಮೀಕ್ಷೆ ಕಾರ್ಯವನ್ನು ಕೈಗೊಂಡಿರುವುದರಿಂದ ಪರಿಹಾರಧನ ಮೊತ್ತವು ಹೆಚ್ಚಾಗಲು ಕಾರಣವಾಗಿರುತ್ತದೆ ಎಂಬುದಾಗಿ ವರದಿ ನೀಡಿರುತ್ತಾರೆ.

ಮೇಲ್ಕಂಡ ವರದಿಯಂತೆ ಬಾಗಲಕೋಟೆ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಉಂಟಾದ ಬೆಳೆ ಹಾನಿ ಬಗ್ಗೆ ವರದಿ ಸಲ್ಲಿಸುವಾಗ ಸದರಿ ಅಧಿಕಾರಿಯವರಿಂದ ಯಾವುದೇ ನಿಷ್ಕಾಳಜಿ ತೋರಿಲ್ಲವೆಂಬಹುದು. ಹಾಗೂ ಸದರಿ ಅಧಿಕಾರಿಯವರು ಜನಪ್ರತಿನಿಧಿಗಳು, ಶಾಸಕರ ಮತ್ತು ಸಚಿವರ ಸಲಹೆಯನ್ನು ಗಮನದಲ್ಲಿರಿಸಿಕೊಂಡು ಸಮೀಕ್ಷೆ ಮಾಡಿರುವುದರಿಂದ ಅಂದಾಜು ಸಮೀಕ್ಷೆಯಲ್ಲಿ ಹೆಚ್ಚುವರಿ ಮೊತ್ತಕ್ಕೆ ಕಾರಣವಾಗಿರುತ್ತದೆ ಎಂಬುದಾಗಿ ಜಂಟಿ ಕೃಷಿ ನಿರ್ದೇಶಕರು, ಬಾಗಲಕೋಟೆ ಇವರು ನೀಡಿರುವ ತನಿಖಾ ವರದಿಯಂತೆ ಪ್ರಕರಣವನ್ನು ಮುಕ್ತಾಯ ಮಾಡಬಹುದೆಂಬ ಕೃಷಿ ಆಯುಕ್ತರ ವರದಿಯನ್ನು ಒಪ್ಪಿ, ಎಸ್. ಐ. ಕಪ್ಪತ್ತನವರ್, ಸಹಾಯಕ ಕೃಷಿ ನಿರ್ದೇಶಕರು, ಇವರನ್ನು ಅವರ ಮೇಲೆ ಹೂಡಲು ಉದ್ದೇಶಿಸಿರುವ ಶಿಸ್ತು ಕ್ರಮದಿಂದ ಕೈಬಿಟ್ಟು ಪ್ರಕರಣವನ್ನು ಮುಕ್ತಾಯ ಮಡಲು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 12 ಕೃಪವಿ 2010.**
**ಬೆಂಗಳೂರು. ದಿನಾಂಕ: 09-01-2013.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣದಿಂದಶ್ರೀ ಎಸ್. ಐ. ಕಪ್ಪತ್ತನವರ್, ಸಹಾಯಕ ಕೃಷಿ ನಿರ್ದೇಶಕರು(ನಿವೃತ್ತ), ಬಾದಾಮಿ, ಬಾಗಲಕೋಟೆ ಜಿಲ್ಲೆ ಇವರ ಮೇಲಿನ ಆರೋಪಗಳಿಗೆ ಸಂಬಂಧಿಸಿದಂತೆ ಕೃಷಿ ಆಯುಕ್ತರು ನೀಡಿರುವ ವರದಿಯನ್ನು ಒಪ್ಪಿ ಅವರ ಮೇಲೆ ಹೂಡಲು ಉದ್ದೇಶಿಸಿರುವ ಶಿಸ್ತುಕ್ರಮ ಕೈಬಿಟ್ಟು ಪ್ರಕರಣವನ್ನು ಮುಕ್ತಾಯ ಮಾಡಲಾಗಿದೆ ಮತ್ತು ಈ ಪ್ರಕರಣದ ಅವರ ನಿಲಂಬನಾ ಅವಧಿಯನ್ನು ಕರ್ತವ್ಯದ ಅವಧಿ ಎಂದು ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ.

9/1/13
(ಮಂಜುನಾಥ ಪಾಟೀಲ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಇವರಿಗೆ:-

1. ಅಕೌಂಟ್ಸ್ ಆಫೀಸರ್, ಜಿಇ-5, ಮಹಾಲೇಖಪಾಲರ ಕಛೇರಿ, (ಲೆಕ್ಕ ಪತ್ರ ಮತ್ತು ಲೆಕ್ಕ ತಪಾಸಣೆ) ಹೊಸಕಟ್ಟಡ, ಬೆಂಗಳೂರು-1.
2. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
3. ಜಿಲ್ಲಾಧಿಕಾರಿಯವರು, ಬಾಗಲಕೋಟೆ, ಬಾಗಲಕೋಟೆ ಜಿಲ್ಲೆ.
4. ಜಂಟಿ ಕೃಷಿ ನಿರ್ದೇಶಕರು, ಬಾಗಲಕೋಟೆ, ಬಾಗಲಕೋಟೆ ಜಿಲ್ಲೆ.
5. ಸಹಾಯಕ ಕೃಷಿ ನಿರ್ದೇಶಕರು, ಬಾದಾಮಿ, ಬಾಗಲಕೋಟೆ, ಬಾಗಲಕೋಟೆ ಜಿಲ್ಲೆ.
6. ಸಂಬಂಧಪಟ್ಟ ಅಧಿಕಾರಿಯವರಿಗೆ (ಕೃಷಿ ಆಯುಕ್ತರು, ಮುಖಾಂತರ)
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.